

بسم اللهِ الرّحمٰن الرّحيم

# ನಡತೆಗಳನ್ನು ಸರಿಪಡಿಸಿಕೊಳ್ಳಿರಿ, ಅಲ್ಲಾಹನ ಸಹಾಯಕ್ಕಾಗಿ ಬೇಡಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **12–02–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ವಿವಿಧ ಖುತ್‌ಬಗಳಲ್ಲಿಯೂ ಭಾಷಣಗಳಲ್ಲಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ ನೀತಿಪಾಠ ನೀಡುವ ಕೆಲವು ವಿಷಯಗಳನ್ನೂ ಕಥೆಗಳನ್ನೂ ವಿವರಿಸಿರುವರು. ವಿವಿಧ ಸಂದರ್ಭಗಳಲ್ಲಿ ನಾನು ಅವುಗಳನ್ನು ವಿವರಿಸಿದ್ದೇನೆ. ಇಂದು ಸಹ ಅಂತಹ ವಿವರಣೆಗಳನ್ನು ನೀಡುವೆನು.

ಒಂದು ಖುತ್‌ಬದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: ಅಲ್ಲಾಹನು ತನ್ನ ಕಡೆಯಿಂದ ಯಾರನ್ನಾದರೂ ನಿಯೋಜಿಸುವಾಗ ಅಥವಾ ಪ್ರವಾದಿ ಗಳನ್ನು ಕಳುಹಿಸುವಾಗ ಅವರಿಗೆ ತನ್ನ ಬೆಂಬಲ ಮತ್ತು ಸಹಾಯವನ್ನೂ ನೀಡುತ್ತಾನೆ. ಸತ್ಯವನ್ನು ಪ್ರಕಟಿಸಲಿಕ್ಕಾಗಿ, ಲೋಕದ ಬಹುಸಂಖ್ಯೆಯ ಜನರನ್ನು ಅವರ ತಪ್ಪು ಕೆಲಸಗಳ ಕಾರಣ ಶಿಕ್ಷಿಸಲು ಇಚ್ಛೆಸುವುದಾದರೆ ಅವನು ಅವರನ್ನು ಶಿಕ್ಷಿಸಲು ಮುಂದಾಗುತ್ತಾನೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಒಂದು ಕಥೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: ಬಾಲ್ಯ ಕಾಲದಲ್ಲಿ ನಮಗೆ ಕಥೆಗಳನ್ನು ಆಲಿಸಲು ಬಹಳ ಆಸಕ್ತಿ ಇತ್ತು. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಕಥೆ ಹೇಳಬೇಕೆಂದು ಆವಶ್ಯಪಟ್ಟರೆ ಅವರು ನೀತಿಬೋಧಕ ಕಥೆಗಳನ್ನು ಹೇಳುತ್ತಿದ್ದರು. ಒಮ್ಮೆ ಅವರು ಈ ಕಥೆ ಹೇಳಿದರು: ಹಝ್ರತ್ ನೂಹ್ ಅಲೈಹಿಸ್ಸಲಾಮರ ಕಾಲದಲ್ಲಿ ಜನರು ಬಹಳ ಅಧಮರಾಗಿದ್ದರು. ಅವರು ಪಾಪ ಕೃತ್ಯಗಳನ್ನು ಮಾಡುತ್ತಾ ಇದ್ದುದರಿಂದ ತೂಫಾನ್ ಬೀಸಿತು. ಜನರು ಪಾಪ ಕೃತ್ಯಗಳಲ್ಲಿ ವರ್ಧಿಸುತ್ತಾ ಹೋದ ಹಾಗೆ ಅಲ್ಲಾಹನ ದೃಷ್ಟಿಯಲ್ಲಿ ಅವರ ಮೌಲ್ಯ ತಗ್ಗುತ್ತಾ ಹೋಗುತ್ತದೆ. ಒಂದು ಪರ್ವತದ ಶೃಂಗದಲ್ಲಿ ಒಂದು ಮರವಿತ್ತು. ಆ ಮರದಲ್ಲಿದ್ದ ಗೂಡಿನಲ್ಲಿ ಒಂದು ಪಕ್ಷಿ ಮರಿ ಇತ್ತು. ಅದರ ತಾಯಿ ಎಲ್ಲಿಗೋ ಹಾರಿ ಹೋಗಿ ಮರಳಿ ಬರಲು ಸಾಧ್ಯವಾಗಲಿಲ್ಲ. ಅದು ಪ್ರಾಯಶಃ ಸತ್ತು ಹೋಯಿತು ಅಥವಾ ಬೇರೆ ಕಾರಣದಿಂದ ಮರಳಿ ಬರಲಿಲ್ಲ. ಆ ಪಕ್ಷಿಯ ಮರಿ ದಾಹದಿಂದ ಚಡಪಡಿಸುತ್ತಿತ್ತು. ಅದು ಕೊಕ್ಕು ತೆರೆದು ಇರಿಸಿತ್ತು. ಅಲ್ಲಾಹನು ಇದನ್ನು ಕಂಡು ದೇವದೂತರಿಗೆ ಆಜ್ಞಾಪಿಸಿದನು. ನೀವು ಭೂಮಿಯ ಮೇಲೆ ಮಳೆ ಸುರಿಸಿರಿ. ಎಷ್ಟು ಮಳೆ ಸುರಿಸಬೇಕೆಂದರೆ ಭೂಮಿಯಲ್ಲಿ ನೀರು ತುಂಬಿ ಅದು ಪರ್ವತದ ಮೇಲಿರುವ ಮರದಲ್ಲಿರುವ ಪಕ್ಷಿ ಗೂಡಿನ ತನಕ ನೀರು ತಲಪಬೇಕು ಮತ್ತು ಪಕ್ಷಿಯ ಮರಿ ನೀರನ್ನು ಕುಡಿಯಲು ಸಾಧ್ಯವಾಗಬೇಕು. ಆಗ ದೇವದೂತರು ಹೇಳಿದರು: ದೇವಾ, ನೀರು ಅಲ್ಲಿಯ ತನಕ ತಲಪಿದರೆ ಲೋಕವಿಡೀ ಮುಳುಗಿ ಹೋಗುವುದು. ಆಗ ಅಲ್ಲಾಹನು ಅವರಿಗೆ ಹೀಗೆ ಉತ್ತರ ನೀಡಿದನು: ಅದರ ಬಗ್ಗೆ ನನಗೆ ಚಿಂತೆ ಇಲ್ಲ. ಈ ಸಮಯದಲ್ಲಿ, ಲೋಕದ ಜನರ ಬಗ್ಗೆ ನನ್ನ ದೃಷ್ಟಿಯಲ್ಲಿ ಆ ಪಕ್ಷಿಯ ಮರಿಯಷ್ಟು ಸ್ಥಾನ ಸಹ ಇಲ್ಲ.

ಇದೊಂದು ಕಥೆಯಾದರೂ ಇದರಲ್ಲಿ ಒಂದು ಪಾಠವಿದೆ. ಸತ್ಯ ಮತ್ತು ನೇರಮಾರ್ಗ ರಹಿತವಾದ ಲೋಕದ ಎಲ್ಲವುಗಳ ಸ್ಥಾನ ಅಲ್ಲಾಹನ ದೃಷ್ಟಿಯಲ್ಲಿ ಒಂದು ಪಕ್ಷಿಯ ಮರಿಯಷ್ಟು ಸಹ ಇಲ್ಲ ಎಂಬದು. ಈ ಕಥೆಯಿಂದ ನಾವು ಪಡೆಯುವ ನೀತಿಪಾಠ ನಾವು ಸತ್ಯದ ಮೇಲೆ ನೆಲೆ ನಿಲ್ಲಬೇಕೆಂದಾಗಿದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿರುವುದು ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಲಿಕ್ಕಾಗಿದೆ. ನಾವು ಆ ರೀತಿ ಇದ್ದೇವೋ ಎಂದು ನಮ್ಮನ್ನು ನಾವೇ ಪರಿಶೋಧಿಸಬೇಕಾಗಿದೆ. ನಾವು ನಮ್ಮಿಂದ ಕೆಡುಕುಗಳನ್ನು ದೂರ ಸರಿಸುವೆವು, ಒಳಿತುಗಳನ್ನು ಸ್ಥಾಪಿಸುವೆವು ಎಂದು ಪ್ರತಿಜ್ಞೆ ಮಾಡಿರುವೆವು. ಆದರೆ ಸಮಯ ಕಳೆದಂತೆ ನಮ್ಮ ಸ್ಥಿತಿಯಲ್ಲಿ ಅಭಿವೃದ್ಧಿಗೆ ಬದಲಾಗಿ ಅವನತಿ ಉಂಟಾಗುತ್ತಿದ್ದರೆ ನಾವು ನಮ್ಮ ಉದ್ದೇಶ ಲಕ್ಷ್ಯದಿಂದ ದೂರ ಸರಿದಿರುತ್ತೇವೆ. ಅಂತಹ ಸ್ಥಿತಿಯಲ್ಲಿ ಅಲ್ಲಾಹನು ಸಹ ನಮ್ಮ ಬಗ್ಗೆ ಲಕ್ಷ್ಯ ನೀಡಲಾರನು.

ಲೋಕದ ಇಂದಿನ ಕಾಲದ ಅತ್ಯಂತ ಕೆಟ್ಟ ಸ್ಥಿತಿಯ ಕಾರಣದಿಂದ ಭೂಕಂಪಗಳು, ತೂಫಾನ್‌ಗಳು, ಗಲಬೆಗೊಂದಲಗಳು, ಮಿತಿಮೀರಿದ ಮಳೆ ಸುರಿಯುವಿಕೆ ಮೊದಲಾದುವುಗಳಿಂದ ವಿನಾಶವು ಲೋಕದಲ್ಲಿ ಹಬ್ಬಿದೆ. ಇದಕ್ಕೆ ಕಾರಣವೇನೆಂದರೆ ಪಾಪ ಕೃತ್ಯಗಳು ಮಿತಿಮೀರಿ ವರ್ಧಿಸುತ್ತವೆ. ಈಗ ಅಲ್ಲಾಹನು ಬರೇ ಮುನ್ನೆಚ್ಚರಿಕೆ ನೀಡುತ್ತಿದ್ದಾನೆ. ಇದಕ್ಕೆ ಸಂಬಂಧಿಸಿ ಅಹ್ಮದಿಯರು ಮಾಡಬೇಕಾದ ದೊಡ್ಡ ಕೆಲಸವಿದೆ. ಲೋಕವನ್ನು ಜಾಗರೂಕರಾಗುವಂತೆ ಮಾಡಬೇಕು. ಜನರು ತಮ್ಮನ್ನು ಸುಧಾರಣೆ ಮಾಡಿಕೊಳ್ಳಲು ಮುಂದಾಗದಿದ್ದರೆ ಅಲ್ಲಾಹನು ಲೋಕದಲ್ಲಿ ಇನ್ನೂ ಹೆಚ್ಚು ವಿನಾಶಕರ ವಿಪತ್ತುಗಳನ್ನು ಬರುವಂತೆ ಮಾಡಲು ಸಾಧ್ಯವಿದೆ. ಲೋಕದ ಜನರಿಗೆ ಬುದ್ಧಿ ಲಭಿಸುವಂತೆ ಅಲ್ಲಾಹನು ಮಾಡಲಿ.

ಲೋಕದಲ್ಲಿ ಈಗ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವ ಬಗ್ಗೆ ಮಾತನಾಡಲಾಗುತ್ತಿದೆ. ಅದರಿಂದ ಅನ್ಯರಿಗೆ ಎಷ್ಟು ನಷ್ಟವಾಗುವುದಾ ದರೂ ಅದರ ಬಗ್ಗೆ ಅವರಿಗೆ ಚಿಂತೆಯಿಲ್ಲ. ಇಸ್ಲಾಮ್ ಆಜ್ಞೆ ನೀಡುವು ದೇನೆಂದರೆ, ತಮ್ಮ ಹಕ್ಕನ್ನು ಪಡೆದುಕೊಳ್ಳುವ ಬಗ್ಗೆ ಪ್ರತಿಯೊಬ್ಬನು ಒತ್ತಾಯಿಸುವುದಕ್ಕೆ ಬದಲಾಗಿ, ಅನ್ಯರಿಗೆ ಹಕ್ಕು ಕೊಡುವ ಬಗ್ಗೆ ಮತ್ತು ಹಕ್ಕುಗಳು ಎಲ್ಲರಿಗೂ ಸಿಗುವ ಹಾಗೆ ಪ್ರಯತ್ನಿಸಬೇಕು ಎಂದಾಗಿದೆ. (ಈ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರಿಗೆ ಸಂಬಂಧಿಸಿದ ವಿಶ್ವಾಸ ವರ್ಧಕವಾದ ಒಂದು ಘಟನೆಯನ್ನು ಹುಝೂರ್ ವಿವರಿಸಿದರು).

ನಂತರ ಹುಝೂರ್ ಹೇಳಿದರು: ಇತ್ತೀಚೆಗೆ ನಾನು ಜಪಾನಿಗೆ ಹೋಗಿದ್ದಾಗ ಸಜ್ಜನರಾದ ಒಬ್ಬ ಕ್ರೈಸ್ತ ಪಾದರಿ ನನ್ನೊಂದಿಗೆ ಕೇಳಿದರು: "ಶಾಂತಿಯ ಅರ್ಥವೇನು? ಅದನ್ನು ಹೇಗೆ ಸ್ಥಾಪಿಸಬಹುದು. ಇದರ ಬಗ್ಗೆ ನನಗೆ ಇದುವರೆಗೂ ಸಮಾಧಾನಕರ ಉತ್ತರ ಲಭಿಸಿಲ್ಲ" ಎಂದು ಹೇಳಿದರು. ನಾನು ಅವರೊಂದಿಗೆ ಹೇಳಿದೆ: ನಾನು ಇದರ ಮೊದಲು ಸಹ ಇದರ ಬಗ್ಗೆ ಹೇಳಿದ್ದೇನೆ. ನೀವು ನಿಮಗೋಸ್ಕರ ಏನನ್ನು ಇಷ್ಟ ಪಡುತ್ತೀರೋ ಅದನ್ನು ಇತರರಿಗೋಸ್ಕರ ಸಹ ಇಷ್ಟಪಡಿರಿ ಎಂದು

ಇಸ್ಲಾಮ್ ಹೇಳುತ್ತದೆ. ಹೀಗೆ ಮಾಡಿದರೆ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಸ್ಥಾಪಿಸುವರು. ಹೀಗೆ ಪರಸ್ಪರ ಹಕ್ಕುಗಳು ಸ್ಥಾಪಿತಗೊಂಡರೆ ಶಾಂತಿ ಸ್ಥಾಪಿತವಾಗುವುದು ಮತ್ತು ಅಂತಹ ಜನರು ಸುರಕ್ಷೆಯನ್ನು ಸ್ಥಾಪಿಸುವರು ಎಂದು ಹೇಳಿದೆ. ಆಗ ಆ ಪಾದರಿ ಹೇಳಿದರು: ನೀವು ನೀಡಿದ ವಿವರಣೆ ನನ್ನ ಹೃದಯಕ್ಕೆ ಬಹಳ ಮೆಚ್ಚಿಗೆಯಾಯಿತು. ಇಂತಹ ವಿವರಣೆ ನಾನು ಮೊದಲ ಬಾರಿ ಆಲಿಸಿದೆ.

ಇಂದಿನ ಕಾಲದಲ್ಲಿ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ವಾಸ್ತವಿಕವಾದ ಮಾರ್ಗ ತೋರಿಸಲು ಇಸ್ಲಾಮ್ ಧರ್ಮಕ್ಕೆ ಮಾತ್ರ ಸಾಧ್ಯವಿದೆ. ಆದರೆ ಅದರ ಪ್ರಾಯೋಗಿಕ ರೂಪವನ್ನು ತೋರಿಸಿಕೊಡದೆ ಲೋಕ ಅದನ್ನು ಅಂಗೀಕರಿಸುವಂತೆ ನಾವು ಮಾಡಲಾರೆವು. ಅನ್ಯಾಯದಿಂದ ಹಕ್ಕುಗಳನ್ನು ಪಡೆಯುವುದಂತೂ ಇರಲಿ, ನಮಗೆ ಲಭಿಸಬೇಕಾದ ಹಕ್ಕುಗಳನ್ನು ಸಹ ತ್ಯಜಿಸಲು ಸಿದ್ಧರಾದರೆ ಮಾತ್ರವೇ ಶಾಂತಿಯು ಸ್ಥಾಪಿಸಲ್ಪಡುವುದು.

ಹಝ್ರತ್ ಇಮಾಮ್ ಹಸನ್ ಮತ್ತು ಇಮಾಮ್ ಹುಸೈನರಿಗೆ ಸಂಬಂಧಿಸಿದ ಒಂದು ಘಟನೆ ಹೀಗಿದೆ: ಒಮ್ಮೆ ಅವರಿಬ್ಬರು ಜಗಳ ಮಾಡಿದರು. ಇಮಾಮ್ ಹುಸೈನ್ ತಪ್ಪುಗಾರರಾಗಿದ್ದರೂ ಅವರಿಂದ ಇಮಾಮ್ ಹಸನ್ ಕ್ಷಮೆ ಯಾಚಿಸಿದರು. ಅದಕ್ಕೆ ಅವರು ಹೇಳಿದ ಕಾರಣ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದರು: ಇಬ್ಬರು ಜಗಳ ಮಾಡಿದ ನಂತರ ಅವರಲ್ಲಿ ಯಾರು ಮೊದಲು ರಾಜಿಯಾಗುತ್ತಾನೋ ಅವನು ಇನ್ನೊಬ್ಬನಿಗಿಂತ ಐನೂರು ವರ್ಷಗಳ ಮೊದಲು ಸ್ವರ್ಗವನ್ನು ಪ್ರವೇಶಿಸುವನು. ಈ ಕಾರಣದಿಂದ ನಾನು ಯೋಚಿಸಿದೆ, ನಿನ್ನೆ ಹುಸೈನ್ ನನ್ನನ್ನು ಬೈದನು. ನನ್ನ ವಿರುದ್ಧ ಬಲ ಪ್ರಯೋಗಿಸಿದನು. ಅವನು ನನ್ನ ಬಳಿಗೆ ಬಂದು ಮೊದಲು ಕ್ಷಮೆ ಯಾಚಿಸಿದರೆ ಮತ್ತು ರಾಜಿ ಆದರೆ ಅದರಿಂದ ನನಗೆ ಇಹಪರ ಲೋಕದಲ್ಲಿ ನಷ್ಟ ಸಂಭವಿಸುವುದು. ಇಹ ಲೋಕದಲ್ಲಿ ನನ್ನ ವಿರುದ್ಧ ಬಲ ಪ್ರಯೋಗ ನಡೆಯಿತು. ಪರಲೋಕದಲ್ಲಿ ಸಹ ನನ್ನ ಸ್ವರ್ಗ ಪ್ರವೇಶ ಹಿಂದೂಡಲ್ಪಡುವುದು. ಆದುದರಿಂದ ನಾನು ತೀರ್ಮಾನಿಸಿದೆ, ನನ್ನ ವಿರುದ್ಧ ನಡೆದುದು ನಡೆದು ಹೋಯಿತು. ನಾನು ಅವನಿಂದ ಮೊದಲು ಕ್ಷಮೆ ಕೇಳುವೆನು. ಅದರ ಫಲವಾಗಿ ನನಗೆ ಐನೂರು ವರ್ಷ ಮೊದಲೇ ಸ್ವರ್ಗ ಪ್ರವೇಶಿಸಲು ಸಾಧ್ಯವಾಗುವುದು ಎಂದು ಹೇಳಿದರು. ನಾವೆಲ್ಲರೂ ಸಹ ಈ ರೀತಿಯಲ್ಲಿ ಯೋಚಿಸಬೇಕು.

(ಇನ್ನೊಂದು ಆಸಕ್ತಿದಾಯಕ ಘಟನೆ ವಿವರಿಸಿದ ನಂತರ ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಉದಾಹರಣೆ ನೀಡಿ ಹೇಳುತ್ತಿದ್ದರು: ಲೋಕದ ಜಗಳಗಳು ನಿರರ್ಥಕವಾಗಿರುತ್ತವೆ. ನನ್ನದೇನೂ ಇಲ್ಲ, ನಿನ್ನದೂ ಏನೂ ಇಲ್ಲ. ಗುಲಾಮನಾದವನಿಗೆ ಏನೂ ಇರುವುದಿಲ್ಲ. ಮನುಷ್ಯನು ತನ್ನನ್ನು "ಅಬ್ದುಲ್ಲಾ" (ಅಲ್ಲಾಹನ ಗುಲಾಮ) ಎಂದು ಹೇಳುತ್ತಾನೆ. ಇದರ ಅರ್ಥ ನನ್ನದೇನೂ ಇಲ್ಲ ಎಂದೇ ಆಗಿದೆ.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನುಬುವ್ವತ್ ಕಾಲದಿಂದ ದೂರ ಹೋಗುತ್ತಿದ್ದೇವೆ. ಮುಂದೆ ಇನ್ನಷ್ಟು ಹೆಚ್ಚು ದೂರವಾಗುತ್ತಾ ಹೋಗುವೆವು. ನಾನು ಇದರ ಬಗ್ಗೆ ಹಿಂದೆ ಸಹ ನಿಮ್ಮ ಗಮನ ಸೆಳೆದಿದ್ದೆ. ನಾವು ಬಹಳ ಜಾಗರೂಕತೆಯಿಂದ ವರ್ತಿಸಬೇಕು. ನಾವು ಮೊದಲಿಗಿಂತ ಹೆಚ್ಚು ಶ್ರದ್ಧೆ ನೀಡಿ ಗಮನಿಸಬೇಕು. ನಾವು ಅಲ್ಲಾಹನ ಗುಲಾಮ (ಅಬ್ದುಲ್ಲಾ) ಆಗಬೇಕಾಗಿದೆ. ನಾವು ನಮ್ಮ ಹಟಮಾರಿತನವನ್ನೂ ನಮ್ಮ ಅಹಂಭಾವವನ್ನೂ ಬಿಟ್ಟುಬಿಡಬೇಕು. ನಾವು ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನಿಸಬೇಕು.

ಈ ವರ್ಷ ಚುನಾವಣೆಯ ವರ್ಷವಾಗಿದೆ. ಜಮಾಅತಿನಲ್ಲಿ ಈ ವರ್ಷ ಚುನಾವಣೆಗಳು ಜರಗಲಿವೆ. ಆದುದರಿಂದ ಪ್ರತಿಯೊಬ್ಬನು ತನ್ನ ಯೋಚನೆಗಳನ್ನು ಸರಿಪಡಿಸುವ ಆವಶ್ಯಕತೆ ಇದೆ. ಪ್ರಾರ್ಥನೆಯೊಂದಿಗೆ, ತನ್ನ ಪ್ರತಿಯೊಂದು ಸಂಬಂಧ, ಪ್ರತಿಯೊಂದು ಕುಟುಂಬ ಬಂಧವನ್ನು ಬಿಟ್ಟು ತನ್ನ ಹಕ್ಕನ್ನು ಸರಿಯಾದ ರೀತಿಯಲ್ಲಿ ಬಳಸಬೇಕು ಮತ್ತು ತನ್ನ ಅಭಿಪ್ರಾಯ ಪ್ರಕಟಿಸಬೇಕು. ಅನಂತರ ಏನು ತೀರ್ಮಾನ ಆಗುತ್ತದೆಯೋ ಅದನ್ನು ಅಂಗೀಕರಿಸಬೇಕು. ಪರಿಪೂರ್ಣವಾಗಿ ತನ್ನ ಸ್ವಾರ್ಥ ಹಿತಾಸಕ್ತಿಯನ್ನು ಬಿಟ್ಟು ತೀರ್ಮಾನಿಸಬೇಕು. ಅಧೀನ ಸಂಘಟನೆಗಳಲ್ಲೂ ಇಂತಹ ಪ್ರಶ್ನೆಗಳು ತಲೆದೋರುತ್ತವೆ. ಅವನನ್ನು ಏಕೆ ಮಾಡಲಾಗಿದೆ. ಇವನನ್ನು ಏಕೆ ಮಾಡಲಿಲ್ಲ. ಅವನು ಹಾಗೆ. ಇವನು ಹೀಗೆ. ಇಂತಹ ನಿರರ್ಥಕ ಮಾತುಗಳನ್ನು ಬಿಟ್ಟು ಬಿಡಬೇಕು. ಯಾರನ್ನು ಹುದ್ದೇದಾರರಾಗಿ ಚುನಾಯಿಸಲಾಗಿದೆಯೋ ಆ ಕಾಲಾವಧಿಯಲ್ಲಿ ಅವರಿಗೆ ಪರಿಪೂರ್ಣವಾಗಿ ಸಹಕಾರ ನೀಡಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ್ದಾರೆ: ಸತ್ಯವಿಶ್ವಾಸಿಯಾದವನು ದೃಢ ನಿರ್ಧಾರದೊಂದಿಗೆ ಪ್ರಯತ್ನಿಸುತ್ತಾ ತನ್ನ ಉದ್ದೇಶ ಲಕ್ಷ್ಯವನ್ನು ತಲಪಬೇಕು. ಅನ್ಯರ ಮೇಲೆ, ಎಂದರೆ ತನ್ನ ಅಧೀನರಾಗಿ ಇರುವವರ ಮೇಲೆ ಮಾತ್ರ ಹೊಂದಿಕೊಂಡಿರದೆ ಅಧಿಕಾರಿಯಾದವನು ಅಥವಾ ಹುದ್ದೇದಾರನಾದವನು ಸ್ವತಃ ನೇರವಾಗಿ ಪ್ರತಿಯೊಂದು ಕೆಲಸದ ಮೇಲ್ವಿಚಾರಣೆ ನಡೆಸಬೇಕು. ಪ್ರತಿಯೊಂದು ಕೆಲಸದಲ್ಲಿ ಜೊತೆ ಸೇರಲು ಪ್ರಯತ್ನಿಸಬೇಕು. ಆಗ ಮಾತ್ರ ಕೆಲಸ ಸರಿಯಾಗಿ ಪೂರ್ಣವಾಗುವುದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಮ್ಮ ಜಮಾಅತಿನವರು ಇಚ್ಛಿಸದೆ ಇದ್ದರೆ ಏನೂ ಆಗಲಾರದು. ಆದರೆ ಅವರು ಇಚ್ಛಿಸುವುದಾದರೆ ದೊಡ್ಡ ದೊಡ್ಡ ಕಷ್ಟದ ಕೆಲಸಗಳನ್ನು ಸಹ ಕೆಲವು ದಿನಗಳಲ್ಲಿ ಮಾಡಬಹುದಾಗಿದೆ. ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ಹೇಗೆ ಯೋಚಿಸಬೇಕೆಂದರೆ, ನಾವು ಕೇವಲ ಇಚ್ಛಿಸಿದರೆ ಮಾತ್ರ ಸಾಲದು. ನಾವು ಇಚ್ಛಿಸಬೇಕು ಮತ್ತು ಇಚ್ಛೆಯನ್ನು ಈಡೇರಿಸಲು ನಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳೊಂದಿಗೆ ಕೆಲಸ ಮಾಡಬೇಕು ಮತ್ತು ಅಲ್ಲಾಹನ ಸಹಾಯ ಬೇಡಿಕೊಳ್ಳಬೇಕು. ವಿಶಿಷ್ಟವಾಗಿ ನಮಾಝ್ ಬಗ್ಗೆ ಹೇಳುವುದಾದರೆ ಅನೇಕ ಜನರು ನನ್ನ ಬಳಿಗೆ ಬಂದು ಹೇಳುತ್ತಾರೆ: ನಮ್ಮ ಬಗ್ಗೆ ಪ್ರಾರ್ಥಿಸಿರಿ. ನಾವು ಕ್ರಮ ಬದ್ಧವಾಗಿ ನಮಾಝ್ ಮಾಡಲು ಇಚ್ಛಿಸುತ್ತೇವೆ ಆದರೆ ನಮ್ಮ ನಮಾಝ್ ಕ್ರಮ ಬದ್ಧವಾಗಿಲ್ಲ ಎಂದು ಹೇಳುತ್ತಾರೆ. ಇಂತಹ ಜನರು ತಮ್ಮ ಇತರ ಕೆಲಸಗಳನ್ನು ಮಾಡಲು ಇಷ್ಟಪಡುತ್ತಾರೆ ಮತ್ತು ಮಾಡುತ್ತಾರೆ. ಆದರೆ ಅವರು ನಮಾಝ್ ಮಾಡುವುದನ್ನು ಇಷ್ಟಪಡುವುದು ಪೂರ್ಣ ಹೃದಯದಿಂದಲ್ಲ. ಅವರು ತಮ್ಮ ಪೂರ್ಣ ಶಕ್ತಿ ಸಾಮರ್ಥ್ಯವನ್ನು ಅದಕ್ಕಾಗಿ ಬಳಸುವುದಿಲ್ಲ. ಅಲ್ಲಾಹನಿಂದ ಸಹಾಯವನ್ನೂ ಬೇಡುವುದಿಲ್ಲ. ಆದುದರಿಂದ ನಮಾಝ್ ಕ್ರಮಬದ್ಧವಾಗಿ ಮಾಡುವ ಅಭ್ಯಾಸ ಅವರಿಗೆ ಆಗುವುದಿಲ್ಲ. ಇಂತಹ ಜನರು ಇಚ್ಛಿಸುವುದು ಇಚ್ಛಿಸದೆ ಇರುವುದಕ್ಕೆ ಸಮವಾಗಿದೆ. ಒಬ್ಬನು ಒಂದು ಕೆಲಸ ಮಾಡಲು ಇಚ್ಛಿಸಿದರೆ ಆ ಕೆಲಸ ಆಗದೆ ಇರುವುದು ಸಾಧ್ಯವಿಲ್ಲ. ಇಂತಹ ಜನರಿಗೆ ನಮಾಝ್ ಮುಖ್ಯವಾದುದಲ್ಲ. ಅವರು

ಲೌಕಿಕ ಕೆಲಸಗಳಿಗೆ ಆದ್ಯತೆ ನೀಡುತ್ತಾರೆ. ಇದೊಂದು ತಪ್ಪು ವಿಧಾನವಾಗಿದೆ. ಆದುದರಿಂದ ಅವರು ತಮ್ಮ ಇಚ್ಛೆ ಪ್ರಕಾರ ವರ್ತಿಸುವುದಿಲ್ಲ. ಒಬ್ಬನು ದೃಢ ನಿರ್ಧಾರದೊಂದಿಗೆ ಇಚ್ಛಿಸಿದರೆ ಆ ಕೆಲಸವನ್ನು ಅವನು ಮಾಡದೆ ಇರಲು ಹೇಗೆ ತಾನೆ ಸಾಧ್ಯ. ಇಲ್ಲಿ ಸ್ವಂತ ಸೋಮಾರಿತನ, ನಿರ್ಲಕ್ಷ್ಯತೆ ಮೊದಲಾದುವುಗಳಿಗೆ ಇಚ್ಛೆ ಎಂಬ ಹೆಸರು ನೀಡಲಾಗುತ್ತಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ನಾವು ಸ್ವತಃ ಹೀಗೆ ಆಲಿಸಿದ್ದೇವೆ. ಒಬ್ಬ ದೊರೆ ಯಾವುದಾದರೂ ಸ್ಥಳಕ್ಕೆ ಹೋಗುವಾಗ ಅವನ ಸಹಾಯಕ ಜೊತೆಗಿರುತ್ತಾನೆ. ಅವನು ಪ್ರವೇಶಿಸಲು ಪ್ರತ್ಯೇಕ ಅನುಮತಿ ಕೇಳಬೇಕಾಗಿರುವುದಿಲ್ಲ. ಇದೇ ರೀತಿ ಅವನ ಜೊತೆಗಿರುವವರೆಲ್ಲಾ ಒಳಗೆ ಹೋಗುತ್ತಾರೆ. ಇಂದಿನ ಕಾಲದಲ್ಲಿ ಸಚಿವರು ಆಗಮಿಸುವಾಗ ಅಥವಾ ಬೇರೆ ಗಣ್ಯರು ಆಗಮಿಸುವಾಗ ಅವರ ಜೊತೆ ಅವರ ಪ್ರೋಟೋಕೋಲ್ ಅಧಿಕಾರಿಗಳು ಅಥವಾ ಭದ್ರತಾ ಸಿಬಂಧಿಗಳು ಜೊತೆಗೆ ಇರುತ್ತಾರೆ. ಅವರ ಬಗ್ಗೆ ಪ್ರತ್ಯೇಕ ಅನುಮತಿ ಬೇಕಾಗಿರುವುದಿಲ್ಲ. ನಿಮ್ಮ ಸ್ಥಿತಿ ಎಷ್ಟು ಕಡಿಮೆ ಮಟ್ಟದ್ದಾಗಿದ್ದರೂ ನೀವು ದೇವದೂತರೊಂದಿಗೆ ಸಂಬಂಧ ಸ್ಥಾಪಿಸುವುದಾದರೆ ಅವರು ಎಲ್ಲಿಗೆ ಹೋಗುತ್ತಾರೋ ಅಲ್ಲಿಗೆ ನೀವು ಅವರ ಜೊತೆ ಹೋಗಬಹುದು. ನೀವು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿದರೆ ಅವನ ದೂತರೊಂದಿಗೆ (ಮಲಕ್‌ಗಳೊಂದಿಗೆ) ಸಂಬಂಧ ಸ್ಥಾಪಿತವಾಗುವುದು. ನೀವು ಅವರ ಪೇದೆಗಳಾಗಿ ಸೇರಿಕೊಳ್ಳುವಿರಿ. ಅವರು ಜನರ ಹೃದಯಗಳಿಗೂ ಮನಸ್ಸುಗಳಿಗೂ ಪ್ರವೇಶಿಸುವಾಗ ನೀವು ಸಹ ಅವರ ಜೊತೆ ಹೋಗುವಿರಿ. ಆದುದರಿಂದ ಅಲ್ಲಾಹನು ನಿಮಗೋಸ್ಕರ ಮಾಡಿರುವ ವೈಭವಶಾಲಿ ಶಕ್ತಿಯನ್ನು ಮನವರಿಕೆ ಮಾಡಿಕೊಳ್ಳಿರಿ. ನಿಮ್ಮ ಶಕ್ತಿ ಆಧ್ಯಾತ್ಮಿಕತೆಯೊಂದಿಗೆ ಸಂಬಂಧಿಸಿದೆ. ನೀವು ಅದನ್ನು ಬಲಿಷ್ಠಗೊಳಿಸಲು ದೇವದೂತರೊಂದಿಗೆ ಹೆಚ್ಚು ಸಂಬಂಧ ಸ್ಥಾಪಿಸಿರಿ. ಆಗ ನಿಮಗೆ ಜನರ ಹೃದಯಗಳನ್ನು ತಲಪಲು ಸಾಧ್ಯವಾಗುವುದು. ಆಗ ಎಲ್ಲಾ ಪರದೆಗಳು ದೂರ ಸರಿಯುವುವು. ಅಲ್ಲಾಹನ ಪ್ರಕಾಶ ಎಲ್ಲಿಗೆ ತಲಪುವುದೋ ಅಲ್ಲಿಗೆ ನೀವು ಸಹ ತಲಪುವಿರಿ.

ನೀವು ಒಂದು ಮೂಲಭೂತ ತತ್ವವನ್ನು ಯಾವಾಗಲೂ ನೆನಪಿನಲ್ಲಿಡಬೇಕು. ನೀವು ಯಾವಾಗೆಲ್ಲಾ ಜಮಾಯಿಸುತ್ತೀರೋ, ಅದು ಜಲ್ಸ ಆಗಿರಲಿ ಇಜ್ತಿಮಾ ಆಗಿರಲಿ ನೀವು ಆಗ ಆಧ್ಯಾತ್ಮಿಕತೆಯ ಅಭಿವೃದ್ಧಿಗೋಸ್ಕರ ಜಮಾಯಿಸುತ್ತೀರಿ. ಆದುದರಿಂದ ಆಗ ನೀವು ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿಗಳಿಸಲು ಪ್ರಯತ್ನಿಸಬೇಕು. ನೀವು ನಿಮ್ಮ ಸಭೆಗಳನ್ನು ತಾತ್ಕಾಲಿಕ ಆಧ್ಯಾತ್ಮಿಕ ಲಾಭಗಳಿಸುವ ಸಭೆಗಳನ್ನಾಗಿ ಮಾಡಬೇಡಿರಿ. ಅದನ್ನು ಹೇಗೆ ಮಾಡಬೇಕೆಂದರೆ ಆಧ್ಯಾತ್ಮಿಕ ಪ್ರಭಾವಗಳು ಸ್ಥಿರವಾಗಿರುವ ಹಾಗೆ ಮಾಡಬೇಕು. ಮತ್ತು ದೇವದೂತರು ಸಹ ನಿಮ್ಮ ಸಹಾಯಕರಾಗುವಂತೆ ಮಾಡಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಕೆಲವು ಸಹಾಬರು ಹೀಗೆ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥಿಸುತ್ತಾ ಇರುವಾಗ ಒಂದು ಪಾತ್ರೆಯಲ್ಲಿ ನೀರು ಕುದಿಯುವ ಹಾಗೆ ತೀವ್ರವಾದ ಶಬ್ದ ಕೇಳಿಸುತ್ತಿತ್ತು. ಆದುದರಿಂದ ತಮ್ಮ ಆತ್ಮವನ್ನು ಸುಧಾರಣೆ ಮಾಡಲು ಗಮನ ಹರಿಸಬೇಕು. ತಖ್ವ ಮತ್ತು ತ್ವಹಾರತ್ ( ಭಯಭಕ್ತಿ ಮತ್ತು ಪರಿಶುದ್ಧಿ) ಸೃಷ್ಟಿಸಬೇಕು.

ನಾವು ಒಳ್ಳೆಯ ಕೆಲಸ ಮಾಡುತ್ತಿದ್ದೇವೆ ಎಂದು ನೀವು ಯೋಚಿಸಬೇಡಿರಿ. ನಾವು ಒಳ್ಳೆಯ ಇರಾದೆಗಳನ್ನು ಹೊಂದಿದ್ದೇವೆ ಎಂದು ನೀವು ಯೋಚಿಸಬೇಡಿರಿ. ಮನುಷ್ಯನು ಎಷ್ಟು ಒಳ್ಳೆಯ ಕೆಲಸ ಮಾಡುತ್ತಾ ಇದ್ದರೂ ಅದರಲ್ಲಿ ಕೆಡುಕು ಉಂಟಾಗಲು ಸಾಧ್ಯತೆಗಳಿವೆ. ಎಷ್ಟು ಉತ್ತಮ ನಿರ್ಧಾರಗಳನ್ನು ಮನುಷ್ಯನು ಹೊಂದಿದ್ದರೂ ಅದು ಅವನ ವಿಶ್ವಾಸವನ್ನು ಬಿಗಡಾಯಿಸಬಹುದಾಗಿದೆ. ಏಕೆಂದರೆ ಈಮಾನ್ ಎಂಬುದು ನಮ್ಮ ಕೆಲಸಗಳ ಪರಿಣಾಮವಾಗಿ ದೊರಕುವುದಿಲ್ಲ. ಅದು ಅಲ್ಲಾಹನ ದಯೆಯ ಪರಿಣಾಮವಾಗಿ ದೊರಕುವುದಾಗಿದೆ. ಈ ಮೂಲಭೂತ ವಿಷಯವನ್ನು ನೆನಪಿಡಬೇಕಾಗಿದೆ. ನಮ್ಮ ಕೆಲಸ ಎಷ್ಟು ವಿಫುಲವಾಗಿದ್ದರೂ ಅಲ್ಲಾಹನ ದಯೆ, ಅಲ್ಲಾಹನ ಅನುಗ್ರಹ ಅದರ ಜೊತೆಗೆ ಇಲ್ಲವಾದರೆ ವಿಶ್ವಾಸ ಪರಿಪೂರ್ಣವಾಗಲಾರದು. ಆದುದರಿಂದ ನೀವು ಅಲ್ಲಾಹನ ದಯೆಯ ಮೇಲೆ ಯಾವಾಗಲೂ ದೃಷ್ಟಿ ಇರಿಸಿರಿ. ನಿಮ್ಮ ದೃಷ್ಟಿ ಯಾವಾಗಲೂ ಅವನ ಕಡೆಗೆ ಇರಲಿ. ಅಲ್ಲಾಹನ ಬಾಗಿಲಿನಿಂದ ಮುಖ ತಿರುಗಿಸಿ ಹೋದರೆ ನನಗೆ ಬೇರೆ ಯಾವ ಬಾಗಿಲು ಸಹ ತೆರೆಯಲ್ಪಡಲಾರದು ಎಂದು ಮನವರಿಕೆ ಮಾಡಿಕೊಂಡ ಭಿಕ್ಷುಕನು ಅಲ್ಲಾಹನ ಅನುಗ್ರಹವನ್ನು ಗಳಿಸುತ್ತಾನೆ. ಆದುದರಿಂದ ನಿಮ್ಮ ದೃಷ್ಟಿ ಯಾವಾಗಲೂ ಅಲ್ಲಾಹನ ಕಡೆಗೇ ಎತ್ತಬೇಕು. ಆದುದರಿಂದ ಸ್ಥಿರವಾಗಿ ತೌಬ ಮತ್ತು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಅಲ್ಲಾಹನ ಅನುಗ್ರಹವನ್ನು ಬೇಡಿಕೊಳ್ಳಬೇಕು. ಅವನ ದಯೆಯನ್ನು ಬೇಡಿಕೊಳ್ಳುತ್ತಾ ಇರಬೇಕು. ಅವುಗಳನ್ನು ಪಡೆಯಲು ಪ್ರಯತ್ನಿಸುತ್ತಾ ಇರಬೇಕು. ಇವುಗಳೆಲ್ಲಾ ಉತ್ತಮವಾದ ಅಂತಿಮ ಗತಿಗೆ ನಮ್ಮನ್ನು ಒಯ್ಯುವುವು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಅಹ್ಮದಿಯತ್ತಿನ ಒಬ್ಬ ಶತ್ರುವಿನ ಬಗ್ಗೆ ಹೀಗೆ ಹೇಳುತ್ತಾರೆ: ಆ ಶತ್ರು ನಮ್ಮ ಮುಂದೆ ಹೀಗೆ ಬಡಾಯಿ ಕೊಚ್ಚಿದನು: ನಾವು ಅಹ್ಮದಿಯ್ಯತ್ತನ್ನು ತುಳಿದು ಹಾಕುವೆವು ಎಂದು ನಾವು ತೀರ್ಮಾನಿಸಿದ್ದೇವೆ. ನಾನು ಅವನಿಗೆ "ನೀವು ತುಳಿದು ಹಾಕಲು ನೋಡಿರಿ" ಎಂದು ಉತ್ತರ ನೀಡಬಹುದಾಗಿತ್ತು. ಆದರೆ ನಾನು ಅವನೊಂದಿಗೆ ಹೇಳಿದೆ: ಅಳಿಸಿಬಿಡುವುದು ಅಥವಾ ಅಳಿಸಿಬಿಡದಿರುವುದು ಅಥವಾ ಸ್ಥಾಪಿಸಿಡುವುದು ಇವು ಅಲ್ಲಾಹನ ಅಧಿಕಾರಕ್ಕೆ ಸೇರಿದೆ. ಅಲ್ಲಾಹನು ನಮ್ಮನ್ನು ನಾಶಮಾಡಲು ಇಚ್ಛಿಸುವುದಾದರೆ ನಿಮ್ಮ ಪ್ರಯತ್ನದ ಆವಶ್ಯಕತೆಯೇ ಇಲ್ಲ. ಅವನೇ ಸ್ವತಃ ನಮ್ಮನ್ನು ನಾಶಮಾಡುವನು. ಆದರೆ ಅಲ್ಲಾಹನು ನಮ್ಮನ್ನು ಸ್ಥಿರವಾಗಿ ಸ್ಥಾಪಿಸಿಡಲು ಇಚ್ಛಿಸುವುದಾದರೆ ಯಾರಿಗೂ ಅದರ ವಿರುದ್ಧ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿದೆ. ನಾನು ಹಾಗೆ ಮಾಡುವೆನು, ಹೀಗೆ ಮಾಡುವೆನು ಎಂದು ಹೇಳುವುದರಿಂದ ಮನುಷ್ಯನನ್ನು ರಕ್ಷಿಸುವುದು ಅವನ ತಖ್ವ (ಭಯಭಕ್ತಿ) ಆಗಿದೆ. ಅಲ್ಲಾಹನು ಹೇಳಿದ್ದಾನೆ: **ಕತಬಲ್ಲಾಹು ಲ ಅಗ್‌ಲಿಬನ್ನ ಅನ ವ ರುಸುಲೀ.** ನಾನು ಮತ್ತು ನನ್ನ ಸಂದೇಶವಾಹಕರು ಜಯಶಾಲಿಗಳಾಗುವರು ಎಂದು ಅಲ್ಲಾಹನು ಬರೆದಿಟ್ಟಿರುವನು ಎಂದು ನಾನು ಹೇಳಿದೆ.

ಅಲ್ಲಾಹನ ವಾಗ್ದಾನಗಳ ಬಗ್ಗೆ ನಮಗೆ ಎಷ್ಟು ದೃಢ ವಿಶ್ವಾಸವಿದೆ ಎಂದರೆ ಅಷ್ಟು ದೃಢವಾದ ವಿಶ್ವಾಸ ನಮ್ಮ ಜೀವದ ಬಗ್ಗೆ ಇಲ್ಲ. ಆದುದರಿಂದ ಅಹ್ಮದಿಯ್ಯತ್ ಜಯಶಾಲಿಯಾಗಲೇ ಬೇಕಾಗಿದೆ. ಅದು ನಮ್ಮ ಜೀವಿತ ಕಾಲದಲ್ಲಿ ಅಥವಾ ಅನಂತರ ಸಂಭವಿಸಬಹುದು. ಆದರೆ

ನಾವು ಈ ವಿಜಯದಲ್ಲಿ ಭಾಗವಹಿಸುವವರಾಗಲು ತಖ್ವದಲ್ಲಿ (ಭಯಭಕ್ತಿಯಲ್ಲಿ) ಸ್ಥಿರವಾಗಿರುವುದು ಬಹಳ ಹೆಚ್ಚು ಆವಶ್ಯಕವಾಗಿದೆ.

ಕೆಲವು ವರ್ಷಗಳ ಹಿಂದೆ, ಅಹ್ಮದಿಯರು ನಫ್ಲ್ ಉಪವಾಸ ಅನುಷ್ಠಿಸಬೇಕೆಂದು ನಾನು ಹೇಳಿದ್ದೆ. ಈಗ ಸಹ ಕೆಲವರು ಉಪವಾಸ ಅನುಷ್ಠಿಸುತ್ತಾ ಇರುತ್ತಾರೆ. ನಾವು ವಾರಕ್ಕೆ ಒಂದರ ಹಾಗೆ ಕನಿಷ್ಠ ನಲ್ವತ್ತು ಉಪವಾಸಗಳನ್ನು ಅನುಷ್ಠಿಸಬೇಕು. ಪ್ರಾರ್ಥನೆ ಮಾಡಬೇಕು. ನಫ್ಲ್ ನಮಾಝ್ ಸಹ ಮಾಡಬೇಕು. ಸದಖ ಕೊಡಬೇಕು. ಯಾಕೆಂದರೆ, ಕೆಲವು ಸ್ಥಳಗಳಲ್ಲಿ ಜಮಾಅತಿನ ವಿರುದ್ಧ ಬಹಳ ಹೆಚ್ಚು ಕಠಿಣ ಕೃತ್ಯಗಳು ನಡೆಯುತ್ತಿವೆ. ನಾವು ಅಲ್ಲಾಹನ ಸನ್ನಿಧಿಯಲ್ಲಿ ಗೋಳಿಟ್ಟರೆ, ಶಿಶು ಅಳುವಾಗ ತಾಯಿಯ ಎದೆಯಲ್ಲಿ ಹಾಲು ಇಳಿದು ಬರುವ ಹಾಗೆ ಆಕಾಶದಿಂದ ನಮ್ಮ ಪ್ರಭುವಿನ ಸಹಾಯ ಇನ್‌ಶಾಅಲ್ಲಾಹ್ ಇಳಿದು ಬರುವುದು. ನಮ್ಮ ಮಾರ್ಗದಲ್ಲಿರುವ ತಡೆಗಟ್ಟುಗಳು ಮತ್ತು ಕಷ್ಟಗಳು ದೂರ ಸರಿದು ಹೋಗುವುವು. ಹಿಂದೆ ಸಹ ದೂರ ಸರಿದಿದ್ದುವು. ಈಗ ಸಹ ಇನ್‌ಶಾಅಲ್ಲಾಹ್ ದೂರ ಸರಿಯುವುವು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ್ದಾರೆ: ಕೆಲವು ಕಷ್ಟಗಳು ಹೇಗಿವೆ ಎಂದರೆ ಅವುಗಳನ್ನು ದೂರ ಸರಿಸುವುದು ನಮಗೆ ಸಾಧ್ಯವಾಗಲಾರದು. ನಾವು ಶತ್ರುಗಳ ನಾಲಗೆಯನ್ನು ತಡೆಯಲಾರೆವು. ಅವರ ಲೇಖನಿಯನ್ನು ತಡೆಯಲಾರೆವು. ಅವರ ನಾಲಗೆಯಿಂದ ಮತ್ತು ಲೇಖನಿಯಿಂದ ಹೊರಬರುವುದನ್ನು ಕೇಳಲಿಕ್ಕೂ ಓದಲಿಕ್ಕೂ ನಮಗೆ ಸಾಧ್ಯವಾಗುವುದಿಲ್ಲ.

ಪಾಕಿಸ್ಥಾನದಲ್ಲಾದರೆ ಅಹ್ಮದಿಯರ ವಿರುದ್ಧ ಕಾನೂನುಗಳು ಸಹ ಇವೆ. ಈ ಕಾನೂನು ನಮ್ಮ ಶತ್ರುಗಳಿಗೆ ಸಹಾಯ ಮಾಡುತ್ತಿವೆ. ಅವರು ತಮಗಿಷ್ಟವಿರುವ ಹಾಗೆ ಮಾಡುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಬಾಯಿಗೆ ಬಂದಂತೆ ಬೈದು ತಮ್ಮ ಕೆಟ್ಟ ಮನೋಭಾವವನ್ನು ಪ್ರದರ್ಶಿಸುತ್ತಾರೆ. ಅಹ್ಮದಿಯರನ್ನು ದೌರ್ಜನ್ಯಗಳಿಗೆ ಗುರಿಪಡಿಸುತ್ತಾರೆ. ಅಲ್ಲಿನ ನ್ಯಾಯಾಲಯಗಳು ಸ್ವಲ್ಪ ಮಾತ್ರಕ್ಕೆ ಶಿಕ್ಷೆ ನೀಡಲು ಮುಂದಾಗುತ್ತವೆ. ಆದುದರಿಂದ ನಾವು ಅಲ್ಲಾಹನ ಮುಂದೆ ಗೋಳಿಟ್ಟು ಬೇಡಿಕೊಳ್ಳುವುದು ಆವಶ್ಯಕವಾಗಿದೆ. ಪಾಕಿಸ್ಥಾನದ ಅಹ್ಮದಿಯರು ಈ ವಿಷಯದ ಬಗ್ಗೆ ಹೆಚ್ಚು ಶ್ರದ್ಧೆ ನೀಡುವ ಆವಶ್ಯಕತೆ ಇದೆ. ನಿಷ್ಠೆಯಿಂದ ಅಲ್ಲಾಹನ ಮುಂದೆ ಬಾಗಿರಿ. ನಫ್ಲ್ ನಮಾಝ್ ಮಾಡಿರಿ. ಸದಖ ಕೊಡಿರಿ. ಉಪವಾಸ ಮಾಡಿರಿ. ಪ್ರಾರ್ಥನೆಯ ಹೊರತು, ಅಲ್ಲಾಹನ ಅನುಗ್ರಹಗಳನ್ನು ಬೇಡಿಕೊಳ್ಳುವ ಹೊರತು ನಮಗೆ ಬೇರೆ ಯಾವ ಮಾರ್ಗವೂ ಇರುವುದಿಲ್ಲ. ಈ ದೌರ್ಜನ್ಯ ಎಲ್ಲೆಲ್ಲಿ ನಡೆಯುತ್ತಿದೆಯೋ ಯಾವ ದೇಶಗಳಲ್ಲಿ ನಡೆಯುತ್ತಿದೆಯೋ ಯಾವ ಪ್ರದೇಶಗಳಲ್ಲಿ ನಡೆಯುತ್ತಿವೆಯೋ ಅಲ್ಲಿರುವ ಅಹ್ಮದಿಯರಿಗೆ ವಿಶಿಷ್ಟವಾಗಿ ಪ್ರಾರ್ಥನೆ ಮಾಡುವ ಭಾಗ್ಯ ದೊರಕಲಿ. ಅವು ಅಲ್ಲಾಹನ ಸಿಂಹಾಸನವನ್ನು ಅಲುಗಾಡಿಸುವಂತಹವುಗಳಾಗಲಿ. ಲೋಕದ ಎಲ್ಲಾ ದೇಶಗಳಲ್ಲಿರುವ ಅಹ್ಮದಿಯರು ಸಹ ಅಹ್ಮದಿಯಾ ಜಮಾಅತಿನ ಅಭಿವೃದ್ಧಿಗೋಸ್ಕರ ಮತ್ತು ಹಿಂಸಾಚಾರಗಳಿಂದ ರಕ್ಷಣೆ ಲಭಿಸಲಿಕ್ಕೋಸ್ಕರ ಪ್ರಾರ್ಥಿಸುವ ಬಗ್ಗೆ ಗಮನ ಹರಿಸಬೇಕು. ಅಲ್ಲಾಹನು ಹೀಗೆ ಮಾಡುವ ಭಾಗ್ಯ ಎಲ್ಲರಿಗೂ ದಯಪಾಲಿಸಲಿ – ಆಮೀನ್.

——————*****——————

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 12-02-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon